**ಸಾಕ್ಷಿಯನ್ನು ದಿಃ23.02.2018 ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ಆರ್.ವಿ.ಆರ್ ವಕೀಲರಿಂದಃ**

ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ನಾನು ಉರ್ದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯು ನಮ್ಮ ಮನೆಯ ಮೇಲೆ ದಾವೆ ಹೂಡಿರುತ್ತಾರೆ. ವಾದಿಯು ದಾವೆಯಲ್ಲಿ ಹಾಕಿದ ದಾವೆ ಸ್ವತ್ತು ಖಾತೆ ಸಂಃ2560/1 ಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಸ್ವತ್ತು

ವಾದಿಯ ಅಕ್ಕನಿಂದ ವಾದಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಇಂದಿನವರೆವಿಗೂ ವಾದಿಯು ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ನಾನು ತಕರಾರಿನಲ್ಲಿ ಹೇಳಿರುವ ಸ್ವತ್ತನ್ನು ದಿ:10.11.1986ರಂದು ನೋಂದಣಿ ಕ್ರಯಪತ್ರದ ಮೂಲಕ ಬೀಬಿ ಜಾನ್ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ಸದರಿ ಬೀಬಿ ಜಾನ್‌ಗೆ ಶೇಕ್ ಖಾದರ್ ಕಡೆಯಿಂದ ಆ ಸ್ವತ್ತು ಬಂದಿರುತ್ತದೆ. ಸದರಿ ಕ್ರಯಪತ್ರದ ದಿನಾಂಕ ನನಗೆ ಗೊತ್ತಿಲ್ಲ ಆದರೆ ನಂತರ ನನ್ನ ತಾಯಿ ಆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ನಮ್ಮ ತಾಯಿಗೆ ನಿಡಿ-6ರ ಮೂಲಕ ತಕರಾರಿನಲ್ಲಿ ಹೇಳಿದ ಆಸ್ತಿ ಬಂದಿರುತ್ತದೆ.

ನಿಡಿ-6ರಲ್ಲಿರುವ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ನನ್ನ ತಾಯಿಯ ಖೈರುನ್ನಿಸ್ಸಾ ಎಂದಿರುತ್ತದೆ. ನಿಡಿ-5ರಲ್ಲಿರುವ ಚೆಕ್ಕುಬಂದಿಯನ್ನು ಸಹ ನಾನು ತಿಳಿದುಕೊಂಡಿರುತ್ತೇನೆ. ದಾವಾಸ್ತಿಯ ಪೂರ್ವಕ್ಕೆ ಖಾಜಾ ಯೂಸಫ್‌ರವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಚಾಂದ್‌ಪಾಷರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಮುನಿಶಾಮಿಯವರ ಮನೆ, ದಕ್ಷಿಣಕ್ಕೆ ಗಂಗಮ್ಮನ ಪಾಳ್ಯದ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಚೆಕ್ಕುಬಂದಿಯಲ್ಲಿರುವಂತಹ ಖಾಲಿ ನಿವೇಶನಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಿ:25.09.2011ರಂದು ಸದರಿ ಖಾಲಿ ನಿವೇಶನಕ್ಕೋಗಿ ವಾದಿಗೆ ತೊಂದರೆ ಕೊಟ್ಟ ಉದ್ದೇಶದಿಂದ ವಾದಿಯು ಈ ದಾವೆಯನ್ನೂಡಿರುತ್ತಾರೆ ಎಂದರೆ ಸರಿಯಲ್ಲ. ನನಗೂ ದಾವಾ ಆಸ್ತಿಗೂ ಸಂಬಂಧ ಇಲ್ಲದಿದ್ದರೂ ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಹಾಕಿ ಸುಳ್ಳು ಸಾಕ್ಷ್ಯ ನುಡಿದು ದಾವೆ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಹೆಸರಿಗೆ 1988-89ರಲ್ಲಿ ಖಾತೆಯಾಗಿರುತ್ತದೆ. ನಮ್ಮ ತಾಯಿ ಕೊಂಡು ಕೊಂಡ ಸ್ವತ್ತಿನ ಪೂರ್ವಕ್ಕೆ ಸೈಯದ್‌ರವರ ಸ್ವತ್ತು, ಪಶ್ಚಿಮಕ್ಕೆ ಕೋಲಾರಕ್ಕೆ ಹೋಗುವ ದಾರಿ, ಉತ್ತರಕ್ಕೆ ಖಾಸಗಿಯವರ ಸ್ವತ್ತು, ದಕ್ಷಿಣಕ್ಕೆ ಗಂಗಮ್ಮನಪಾಳ್ಯಕ್ಕೆ ಹೋಗುವ ರಸ್ತೆ ಬರುತ್ತದೆ. ನಾನು ಹಾಕಿದ ನಿಡಿ-12ರಲ್ಲಿ ಕಾಣುವ ವಿಷಯ ಸರಿ ಇರುತ್ತದೆ.

**<u>ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

(ಎ.ಸಿ. ದಯಾನಂದ ಮೂರ್ತಿ)
ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ.